# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 603
ಸದಸ್ಯರ ಹೆಸರು : ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ
ಉತ್ತರಿಸುವ ದಿನಾಂಕ : 24.07.2019
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಾರವಾರ ಜಿಲ್ಲೆಯಲ್ಲಿ ವಿಕಲಚೇತನರಿಗೆ ನೀಡುತ್ತಿರುವ ಸುಧಾರಿತ ದ್ವಿಚಕ್ರ ವಾಹನಗಳ ಸೌಲಭ್ಯವನ್ನು ಪಡೆಯಲು ನಿಗದಿ ಮಾಡಿರುವ ಮಾನದಂಡವೇನು; (ವಿವರ ನೀಡುವುದು) | ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು ಪಡೆಯಲು ಇಲಾಖೆಯಿಂದ ನಿಗದಿಪಡಿಸಿರುವ ಮಾನದಂಡಗಳನ್ನು ಅನುಬಂಧ-01ರಲ್ಲಿ ನೀಡಲಾಗಿದೆ. |
| ಆ | ಕಳೆದ 3 ವರ್ಷಗಳಿಂದ ಕಾರವಾರ ಜಿಲ್ಲೆಗಳಲ್ಲಿ ಎಷ್ಟು ವಿಕಲಚೇತನರಿಂದ ಸುಧಾರಿತ ದ್ವಿಚಕ್ರ ವಾಹನಕ್ಕೆ ಅರ್ಜಿ ಸಲ್ಲಿಕೆಯಾಗಿವೆ; (ವಿವರ ನೀಡುವುದು) | ಕಳೆದ 3 ವರ್ಷಗಳಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ವಿಕಲಚೇತನರಿಂದ ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು ಕೋರಿ ಒಟ್ಟು 1200 ಅರ್ಜಿಗಳು ಸಲ್ಲಿಕೆಯಾಗಿವೆ. |
| ಇ | ಇದುವರೆಗೂ ಎಷ್ಟು ವಿಕಲಚೇತನರಿಗೆ ಸುಧಾರಿತ ದ್ವಿಚಕ್ರ ವಾಹನವನ್ನು ವಿತರಿಸಲಾಗಿದೆ; ಉಳಿದ ಅರ್ಜಿದಾರರಿಗೆ ಯಾವ ಕಾಲಮಿತಿಯೊಳಗೆ ಸುಧಾರಿತ ದ್ವಿಚಕ್ರ ವಾಹನ ವಿತರಿಸಲಾಗುವುದು; (ವಿವರ ನೀಡುವುದು) ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ನೀಡುವ ಸುಧಾರಿತ ದ್ವಿಚಕ್ರ ವಾಹನಗಳೆಷ್ಟು? (ಸಂಪೂರ್ಣ ವಿವರ ನೀಡುವುದು) | ಇದುವರೆಗೂ 960 ವಿಕಲಚೇತನರಿಗೆ ಸುಧಾರಿತ ದ್ವಿಚಕ್ರವಾಹನಗಳನ್ನು ವಿತರಿಸಲಾಗಿದೆ, ವಿವರವನ್ನು ಅನುಬಂಧ-02ರಲ್ಲಿ ನೀಡಲಾಗಿದೆ.<br><br>ಉಳಿದ 240 ಅರ್ಜಿದಾರರ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಇಲಾಖಾ ಅನುದಾನ ಹಾಗೂ ಇತರೆ ಅನುದಾನಗಳಡಿಯಲ್ಲಿ ಅರ್ಹ ಪ್ರಕರಣಗಳಲ್ಲಿ (ನಿಗದಿಪಡಿಸಿರುವ ಮಾನದಂಡಗಳಡಿ) ಅನುದಾನದ ಲಭ್ಯತೆಗೊಳಪಟ್ಟು ವಿತರಿಸಲಾಗುವುದು. |

**ಸಂಖ್ಯೆ: ಮಮಇ 74 ಪಿಹೆಚ್‌ಪಿ 2019**

(ಡಾ|| ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರೀಕರ ಸಬಲೀಕರಣ
ಇಲಾಖಾ ಸಚಿವರು

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 603ಕ್ಕೆ

## ಅನುಬಂಧ–01

## ಇಲಾಖಾ ಅನುದಾನದಡಿ ಯಂತ್ರಚಾಲಿತ ದ್ವಿಚಕ್ರವಾಹನ ನೀಡುವ ಯೋಜನೆಚುಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಅಭ್ಯರ್ಥಿಗಳು ಈ ಕೆಳಗಿನಂತೆ ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ.

1. ಈ ಯೋಜನೆಯ ಸೌಲಭ್ಯ ಪಡೆಯಲು ಕುಟುಂಬದ ವಾರ್ಷಿಕ ಆದಾಯ ರೂ.2,00,000/– ಗಳಿಗಿಚಿತ ಕಡಿಮೆಇರಬೇಕು.
2. ವಿಕಲಚೇತನ ವ್ಯಕ್ತಿಯು ಭಾರತದ ಪ್ರಜೆಯಾಗಿದ್ದು, ಕರ್ನಾಟಕದಲ್ಲಿ ಕನಿಷ್ಠ 10 ವರ್ಷಗಳಿಂದ ವಾಸವಾಗಿರಬೇಕು. 20 ರಿಂದ 60 ವಯೋಮಾನದ ತೀವ್ರತರನಾದ ದೈಹಿಕ ವಿಕಲಚೇತನರಿಗೆ ಜೀವಿತಕಾಲದಲ್ಲಿ 1 ಬಾರಿ ಮಾತ್ರ ಸೌಲಭ್ಯ ಕಲ್ಪಿಸಬಹುದಾಗಿದೆ.
3. ಅಂಗವಿಕಲರ ಅಧಿನಿಯಮದಲ್ಲಿ ಸ್ರಚಿಸಿರುವ ಹಾಗೂ ವೈದ್ಯಕೀಯ ಪ್ರಾಧಿಕಾರದಿಂದ ನೀಡಿರುವ ಗುರುತಿನ ಚೀಟಿಯೊಂದಿಗೆ ದೃಢೀಕೃತ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಬೇಕು. ಇತರ ಇಲಾಖೆಗಳು ಅಥವಾ ಸಂಘ ಸಂಸ್ಥೆಗಳಿಂದ ಯಂತ್ರಚಾಲಿತ ದ್ವಿಚಕ್ರವಾಹನ ಪಡೆದಿದ್ದಲ್ಲಿ ಅಚಿತಹವರು ಅರ್ಹರಾಗಿರುವುದಿಲ್ಲ.
4. ಈ ಸೌಲಭ್ಯ ಪಡೆಯುವ ದೈಹಿಕ ವಿಕಲಚೇತನರು ಶೇಕಡಾ 75% ಕ್ಕಿಂತ ಹೆಚ್ಚಿನ ದೈಹಿಕ ವಿಕಲಚೇತನರಾಗಿರಬೇಕು ಹಾಗೂ ಸೊಂಟದ ಕೆಳಗೆ ಅಚಿದರೆ 2 ಕಾಲುಗಳಲ್ಲಿ ಸ್ವಾಧೀನ ಕಳೆದುಕೊಂಡಿರುವ ಆದರೆ 2 ಕೈಗಳು ಸ್ವಾಧೀನದಲ್ಲಿರುವ ಹಾಗೂ ಇತರೇ ಎಲ್ಲಾರೀತಿಯಲ್ಲಿ ಸದೃಢವಾಗಿರುವ ವಿಕಲಚೇತನರಾಗಿರಬೇಕು. ಇಚಿತಹ ನ್ಯೂನತೆಯನ್ನು ಹೊಂದಿರುವ ವಿವಿದೋದ್ದೇಶ ಪುನರ್ವಸತಿಕಾರ್ಯಕರ್ತೆಯರಿಗೆ (ಎಂ.ಆರ್.ಡಬ್ಲ್ಯೂ) ಮೊದಲ ಆದ್ಯತೆ ಮೇಲೆ ಈ ಸೌಲಭ್ಯ ನೀಡಬಹುದಾಗಿದೆ.
5. ಈ ಸೌಲಭ್ಯ ಪಡೆಯಲಿಚ್ಚಿಸುವ ವಿಕಲಚೇತನರು ದ್ವಿಚಕ್ರವಾಹನ ಚಾಲನೆ ಮಾಡುವ ಪರವಾನಗಿ ಪತ್ರ ಪಡೆದಿರಬೇಕು.
6. ಯಂತ್ರಚಾಲಿತ ದ್ವಿಚಕ್ರವಾಹನವನ್ನು ಅವರ ಜೀವಿತಾವಧಿಯಲ್ಲಿ ಯಾವುದೇಕಾರಣಕ್ಕೆ ಪರಭಾರೆ ಮಾಡಬಾರದು, ಮಾಡಿದ್ದು ಕಂಡುಬಂದಲ್ಲಿ ಅಚಿತಹವರ ಮೇಲೆ ಕಾನೂನು ಕ್ರಮ ಜರುಗಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದು

****

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 603ಕ್ಕೆ
## ಅನುಬಂಧ-02

**2016-17 ರಿಂದ 2018-19ರ ಕಳೆದ 03 ವರ್ಷದ ಅವಧಿಯಲ್ಲಿ ಕಾರಾವಾರ ಜಿಲ್ಲೆಯಲ್ಲಿ ವಿಕಲಚೇತನರಿಗೆ ವಿವಿಧ ಅನುದಾನಗಳಡಿಯಲ್ಲಿ ಯಂತ್ರಚಾಲಿತ ದ್ವಿಚಕ್ರವಾಹನ ವಿತರಿಸಿರುವ ವಿವರ**

| ಕ್ರ ಸಂ | ತಾಲ್ಲೂಕು | ಜಿಲ್ಲಾ ಉಸ್ತುವಾರಿ ಸಚಿವರಿಂದ | ವಿಧಾನ ಪರಿಷತ್ತು | ನಗರ ಸಭೆ | ಹೆವೆಲ್ಸ್ ಕಂಪನಿ | ಇನ್ಫೋಸಿಸ್ (ಸಿಎಸ್‌ಆರ್) | ಜಿಲ್ಲಾ ಪಂಚಾಯತ | ಶಾಸಕರ ನಿಧಿ | ಪುಸಭೆ/ ಪಟ್ಟಣ ಪಂಚಾಯತ್ | ತಾಲೂಕ ಪಂಚಾಯತ | ಗ್ರಾಮ ಪಂಚಾಯತ | ಇಲಾಖೆ | ಒಟ್ಟು |
|---|---|---|---|---|---|---|---|---|---|---|---|---|---|
| 1 | ಕಾರವಾರ | 07 | 01 | 18 | 06 | – | 03 | 19 | – | 06 | – | 16 | **76** |
| 2 | ಅಂಕೋಲಾ | 04 | 01 | – | 02 | – | 02 | 12 | 03 | – | – | 20 | **44** |
| 3 | ಕುಮಟಾ | 01 | 01 | 02 | 01 | – | 04 | 28 | – | 04 | – | 15 | **56** |
| 4 | ಹೊನ್ನಾವರ | 02 | – | – | 02 | – | 04 | 21 | 04 | 08 | 02 | 7 | **50** |
| 5 | ಭಟ್ಕಳ | 03 | 01 | 06 | 02 | – | 05 | 45 | – | 15 | 03 | 12 | **92** |
| 6 | ಶಿರಸಿ | 02 | 01 | 11 | 04 | – | 05 | 20 | – | 04 | 01 | 20 | **68** |
| 7 | ಸಿದ್ದಾಪುರ | 02 | 04 | – | 02 | – | 04 | 15 | – | – | – | 5 | **32** |
| 8 | ಯಲ್ಲಾಪುರ | 01 | 01 | – | 01 | – | 01 | 57 | 08 | 21 | – | 10 | **100** |
| 9 | ಮುಂಡಗೋಡ | 03 | – | – | 03 | – | 03 | 42 | – | 01 | 08 | 19 | **79** |
| 10 | ಹಳಿಯಾಳ | 96 | 01 | – | 32 | 104 | 03 | 19 | 11 | 01 | 05 | 11 | **283** |
| 11 | ಜೋಯಿಡಾ | 30 | 01 | – | 06 | – | 01 | 25 | – | 08 | 06 | 3 | **80** |
| | ಒಟ್ಟು | **151** | **12** | **37** | **61** | **104** | **35** | **303** | **26** | **68** | **25** | **138** | **960** |

ಷರಾ: 240 ಅರ್ಜಿಗಳು ಬಾಕಿ ಇರುತ್ತವೆ.

22/7/19

****